# ಸ್ವಾಮಿ ಆತ್ಮಾನಂದರು

ಸ್ವಾಮಿ ವಿವೇಕಾನಂದರ ಒಬ್ಬೊಬ್ಬ ಶಿಷ್ಯರೂ ಸ್ವಾಮೀಜಿಯವರ ಅಗಾಧವಾದ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತಾರೆ. 'ಸ್ವಾಮೀಜೀರ್ ಪದಪ್ರಾಂತೇ' ಎಂಬ ಬಂಗಾಳಿ ಗ್ರಂಥದಿಂದ ಸ್ವಾಮಿ ಆತ್ಮಾನಂದರ ಜೀವನದ ಸಂಗ್ರಹಾನುವಾದ ಮಾಡಿದವರು ಬೆಂಗಳೂರಿನ ರಾಮಕೃಷ್ಣ ಮಠದ ನಿಕಟ ಭಕ್ತರಾದ ವಿ. ಮೀನಾ ಅವರು.

"ಜ್ಞಾನ, ಭಕ್ತಿ, ಯೋಗ, ಕರ್ಮಗಳ ಎಲ್ಲಾ ಭಾವಗಳೂ ಈತನಲ್ಲಿವೆ"ಎಂದು ಸ್ವಾಮಿ ವಿವೇಕಾನಂದರಿಂದ ಪ್ರಶಂಸಿಸಲ್ಪಟ್ಟವರೇ ಸ್ವಾಮಿ ಆತ್ಮಾನಂದರು. ಶಾಂತ ಪ್ರಕೃತಿ ಹಾಗೂ ಮಿತಭಾಷಿಗಳಾದ ಆತ್ಮಾನಂದರ ಬಗೆಗೆ ಸ್ವಾಮಿ ಬ್ರಹ್ಮಾನಂದರು ಓರ್ವ ಶಿಷ್ಯನಿಗೆ ಈ ರೀತಿ ಹೇಳುತ್ತಾರೆ: "ಆತ್ಮಾನಂದರಂತಹ ಮಹಾಪುರುಷರ ಸೇವೆ ಹಾಗೂ ಸಂಗಲಾಭ ಪಡೆದವರು ಮಹಾ ಭಾಗ್ಯವಂತರು." ಬಿಹಾರ ಪ್ರದೇಶದ ನಿವಾಸಿಗಳಾದ ದುರ್ಗಾಪ್ರಸಾದರ ಪ್ರಥಮ ಪುತ್ರರೇ ಗೋವಿಂದ ಪ್ರಸಾದರು. ಇವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಸ್ವಾಮಿ ವಿವೇಕಾನಂದರ ಶ್ರೇಷ್ಠ ಸಂನ್ಯಾಸಿ ಶಿಷ್ಯರಾದ ಸ್ವಾಮಿ ಶುದ್ಧಾನಂದ, ಸ್ವಾಮಿ ವಿರಜಾನಂದ, ಸ್ವಾಮಿ ವಿಮಲಾನಂದ ಮುಂತಾದವರ ಸಹಪಾಠಿಗಳಾಗಿದ್ದರು. ಚಾಂಚಲ್ ರಾಜನ ಉಚ್ಚವಿದ್ಯಾಲಯದಲ್ಲಿ ಪ್ರವೇಶಿಕಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಆ ರಾಜನ ಆರ್ಥಿಕ ಸಹಾಯದಿಂದಲೇ ಕಲ್ಕತ್ತೆಯ ರಿಪ್ಪನ್ ಕಾಲೇಜಿನಲ್ಲಿ ಎಫ್.ಎ. ಓದಲು ಪ್ರಾರಂಭ ಮಾಡಿದರು. ಅವರ ಮನೆಯ ಹತ್ತಿರದಲ್ಲೇ ವಾಸಿಸುತ್ತಿದ್ದ ಖಗೇಂದ್ರರೊಡನೆಯೂ ಗೋವಿಂದ ಪ್ರಸಾದರಿಗೆ ಸ್ನೇಹ ಉಂಟಾಯಿತು. ಮುಂದೆ ಅವರೇ ವಿಮಲಾನಂದ ಸ್ವಾಮಿಗಳೆಂದು ರಾಮಕೃಷ್ಣ ಮಠದಲ್ಲಿ ಖ್ಯಾತರಾದರು. ವಿಮಲಾನಂದರ ಮನೆಯಲ್ಲಿಯೇ ಈ ಬಂಧುಗಳ ಧರ್ಮಜೀವನ ಒಂದು ವಿಶಿಷ್ಟ ರೂಪವನ್ನು ತಾಳಿತ್ತು. ಬಂಧುಗಳೊಂದಿಗೆ ಗೋವಿಂದ ಪ್ರಸಾದರಿಗೆ "ಮ" (ಮಹೇಂದ್ರನಾಥ ಗುಪ್ತ), ರಾಮಚಂದ್ರ ದತ್ತ, ಮನಮೋಹನ ಮಿತ್ರ, ಗಿರೀಶಚಂದ್ರ ಮುಂತಾದ ಶ್ರೀರಾಮಕೃಷ್ಣರ ಗೃಹೀ ಶಿಷ್ಯರ ಪರಿಚಯವೂ ಆಯಿತು. ಇದರಿಂದಾಗಿ ಅವರ ಆಧ್ಯಾತ್ಮಿಕ ಜೀವನಕ್ಕೆ ಒಳ್ಳೆಯ ಪ್ರೇರಣೆ ಸಿಕ್ಕಿತು. "ಮ"ರವರ ಆದೇಶದಂತೆ ವರಾಹನಗರ ಮಠದಲ್ಲಿನ ಶ್ರೀರಾಮಕೃಷ್ಣ ಸಂನ್ಯಾಸೀ ಶಿಷ್ಯರ ತಿತಿಕ್ಷೆ, ತಪೋಮಯ ಜೀವನವನ್ನು ಕಂಡು ಗೋವಿಂದ ಪ್ರಸಾದರು ಆಕೃಷ್ಟರಾದರು. ರಾಮಕೃಷ್ಣಾನಂದಜೀಯವರೇ ಹೆಚ್ಚಿನ ಸಮಯವನ್ನು ಈ ಯುವಕರೊಂದಿಗೆ ಕಳೆದು ಅವರಿಗೆ ಸ್ಫೂರ್ತಿದಾಯಕರಾಗಿದ್ದರು.

ಬಿ.ಎ. ಪರೀಕ್ಷೆಗೆ ಓದುತ್ತಿರುವಾಗಲೇ ಗೋವಿಂದರ ವೈರಾಗ್ಯದ ಅನಲ ಹೆಚ್ಚಾಗಿ ಪ್ರಜ್ವಲಿಸತೊಡಗಿತು. ಆಲಂಬಜಾರಿಗೆ ವರ್ಗಾವಣೆ ಆದ ಮಠಕ್ಕೂ ಹೆಚ್ಚಾಗಿ ಹೋಗಿಬರುತ್ತಾ ಒಂದು ಹೊಸ ರಾಜ್ಯದ ಸಂಪರ್ಕವನ್ನು ಪಡೆದು ಗೋವಿಂದ ಪ್ರಸಾದರು ಅತ್ಯಂತ ಆನಂದಿತರಾದರು. ಇಷ್ಟರಲ್ಲಿ ವೈರಾಗ್ಯದಿಂದ ತುಂಬಿದ ಮಗನನ್ನು ಕಂಡು ಮನೆಯವರು ಆತನಿಗೆ ವಿವಾಹವನ್ನು ಮಾಡಿದರು. ಆದರೆ ಸಂಸಾರಿಯನ್ನಾಗಿ ಮಾಡಲಾಗಲಿಲ್ಲ. ಚಾಂಚಲ್ ಮಹಾರಾಜರಿಗೆ ಗೋವಿಂದ ಪ್ರಸಾದರ ವೈರಾಗ್ಯದ ಕತೆ ಕಿವಿಗೆ ಬಿದ್ದು ಅವರ ಭವಿಷ್ಯತ್ ಜೀವನದಲ್ಲಿ ನಿರಾಸೆಯುಂಟಾಗಿ ಅವರ ಓದಿಗಾಗಿ ಇನ್ನು ಮುಂದೆ ಹಣವನ್ನು ಕೊಡುವುದನ್ನು ನಿಲ್ಲಿಸಿಬಿಟ್ಟರು. ಆದುದರಿಂದ ಅವರ ಓದು ಅಲ್ಲಿಗೇ ನಿಂತುಹೋಯಿತು. ಸಂಸಾರದ ಈ ನಾನಾ ಜಂಜಾಟಗಳಿಂದ ಅವರ ವೈರಾಗ್ಯ ಇನ್ನೂ ತೀವ್ರವಾಯಿತು.

ಅವರು ಕಾಲೇಜಿನಲ್ಲಿ ಓದುತ್ತಿರುವಾಗಲೇ ಯಾವುದೊ ಸಮಯದಲ್ಲಿ ಶ್ರೀಮಾತೆಯವರಿಂದ ಮಂತ್ರದೀಕ್ಷೆಯನ್ನು ಪಡೆದು ಕೃತಾರ್ಥರಾಗಿದ್ದರು. ಸಂಸಾರದ ನಾನಾ ಜಂಜಾಟಗಳಿಂದ ದೂರವಿದ್ದು ಸಾಧನೆ ಮಾಡಲು ಸ್ವಾಮಿ ತ್ರಿಗುಣಾತೀತಾನಂದರ ಸೂಚನೆಯಂತೆ ದಕ್ಷಿಣೇಶ್ವರ ಕಾಳೀ ದೇವಸ್ಥಾನದಲ್ಲಿದ್ದುಕೊಂಡು ನಿಶ್ಚಿಂತರಾಗಿ ಸಾಧನೆ ಭಜನೆ ಮಾಡಲಾರಂಭಿಸಿದರು. ಆಲಂಬಾಜಾರಿನಲ್ಲಿ ರಾಮಕೃಷ್ಣಾನಂದಜೀಯವರು ಸಹ ಗೋವಿಂದರಿಗೆ ನಾನಾ ಪ್ರಕಾರ ಉಪದೇಶವಿತ್ತು ಅವರ ಭಾವೀ ಸಂನ್ಯಾಸೀ ಜೀವನವನ್ನು ರೂಪಿಸುತ್ತಿದ್ದರು. ೧೮೯೭ರಲ್ಲಿ ರಾಮಕೃಷ್ಣಾನಂದರ ಆದೇಶದಂತೆ ಮಠಕ್ಕೆ ಬಂದು ಸೇರಿದರು. ಮನೆಯ ನೆಂಟರಿಷ್ಟರು ಅವರನ್ನು ಮಠದಿಂದ ಹಿಂತಿರುಗಿಸಲು ಚಾಂಚಲ್ ರಾಜನ ಸಹಾಯವನ್ನು ಕೇಳಿದರು. ತುರ್ತುವಾರ್ತೆ ಇದೆಯೆಂದು ರಾಜನು ಹೇಳಿ ಕಳುಹಿಸಲು ರಾಜನ ಹಣದಿಂದ ವಿದ್ಯಾಭ್ಯಾಸ ಪಡೆದ ಕೃತಜ್ಞತೆಯಿಂದ ಗೋವಿಂದರು ಅಲ್ಲಿಗೆ ಬಂದರು. ಆಗ ಅವರೆಲ್ಲಾ ಸೇರಿ ಗೃಹಸ್ಥ ಧರ್ಮವನ್ನು ತ್ಯಜಿಸುವುದು ಧರ್ಮವಲ್ಲವೆಂದು ಉಪದೇಶಿಸಿದರು. ಕೊನೆಗೆ ಯಾವ ಮಾತಿಗೂ ಗೋವಿಂದರು ಒಪ್ಪದಿದ್ದ ಕಾರಣ ರಾಜಶಾಸನವನ್ನೇ ಮಾಡಿಸಿದರು. ಗೋವಿಂದರು ಅದನ್ನೂ ತಿರಸ್ಕರಿಸಿದರು. ಇದನ್ನೆಲ್ಲಾ ಕಂಡು ಗೋವಿಂದರ ಭಾರ್ಯೆ ಬ್ರಹ್ಮಮಯೀ ದೇವಿ ಅಳಲು ಪ್ರಾರಂಭ ಮಾಡಿದರು. ಇಂತಹ ಸಮಯದಲ್ಲಿ ಪಲಾಯನ ಒಂದೇ ಮಾರ್ಗವೆಂದು ಯೋಚಿಸಿ ಗೋವಿಂದರು ರಾತ್ರಿಯಲ್ಲಿ ಮನೆಯವರಾರಿಗೂ ಸುಳಿವು ಕೊಡದೆ ಮಠಕ್ಕೆ ವಾಪಸಾದರು. ಕಾಲಾನಂತರ ಅವರ ಪತ್ನಿ ಬ್ರಹ್ಮಮಯೀ ದೇವಿ ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದು ಆಧ್ಯಾತ್ಮಿಕ ಸಾಧನೆಯಲ್ಲಿ ತಮ್ಮ ಜೀವನವನ್ನು ಕಳೆದರು.

ಸಾಧನೆಯೊಂದಿಗೆ ಮಠವಾಸಿಗಳಿಗೆ ಸೇವೆ ಮಾಡುತ್ತಾ ಗೋವಿಂದರು ಅತ್ಯಂತ ಆನಂದದಿಂದ ತಮ್ಮ ದಿನಗಳನ್ನು ಕಳೆದರು. ೧೮೯೭ರಲ್ಲಿ ಸ್ವಾಮಿ ವಿವೇಕಾನಂದರು ವಿಜಯದುಂದುಭಿಯನ್ನು

ವೊಳಗಿ ಪಾಶ್ಚಾತ್ಯದೇಶಗಳಿಂದ ಭಾರತಕ್ಕೆ ಮರಳಿದರು. ಮಠವಾಸಿಗಳೆಲ್ಲಾ ಗೋವಿಂದರನ್ನು ಶುಕುಲ್ ಎನ್ನುತ್ತಿದ್ದರು. ಆ ಬಾಲಕನ ನಿಷ್ಠೆ, ನಡವಳಿಕೆ, ಸೇವಾಪರಾಯಣತೆ ಮುಂತಾದವನ್ನು ಗಮನಿಸಿ ಸ್ವಾಮಿ ವಿವೇಕಾನಂದರು ಕೇಳುತ್ತಾರೆ, "ಏನು ಶುಕುಲ್, ನೀನು ಇಲ್ಲಿಗೆ ಸಂನ್ಯಾಸಿಯಾಗಲು ಬಯಸಿ ಬಂದೆಯಾ?" ಎಂದು. ತಕ್ಷಣ ಶುಕುಲ್ ಉತ್ತರವಿತ್ತರು,"ಸ್ವಾಮೀಜಿ, ಸಾಧುವಾಗುವುದಕ್ಕೆ ಬೇಕಾದ ಶರೀರ ಬಲವಾಗಲೀ, ಮಾನಸಿಕ ಬಲವಾಗಲೀ ನನಗಿಲ್ಲ. ಆದ್ದರಿಂದ ಈ ಶುಷ್ಕಶರೀರದಿಂದ ನಿಮ್ಮ ಯತ್‌ಕಿಂಚಿತ್ ಸೇವೆಯನ್ನು ಮಾಡಿದರೆ ಮುಂದಿನ ಜನ್ಮಕ್ಕಾದರೂ ಬಲಿಷ್ಠವಾದ ಶರೀರ, ದೃಢ ಚಿತ್ತ ನನಗುಂಟಾಗುವುದೆಂದು ಭಾವಿಸಿ ಇಲ್ಲಿರುವೆ" ಎಂದರು. ಆತನ ಸರಳ ನೇರವಾದ ಉತ್ತರವನ್ನು ಕೇಳಿ ಸ್ವಾಮಿ ವಿವೇಕಾನಂದರು "That's right" (ಅದು ಸರಿ) ಎಂದರು. ಇದು ನಡೆದ ಎರಡು ಮೂರು ದಿನಗಳಲ್ಲೇ, ಗೋವಿಂದರಿಗೆ ಹಾಗೂ ಇನ್ನೋರ್ವ ಬ್ರಹ್ಮಚಾರಿಗಳಿಗೆ ಸ್ವಾಮಿ ವಿವೇಕಾನಂದರು ಸಂನ್ಯಾಸ ದೀಕ್ಷೆಯನ್ನಿತ್ತರು. ಆಗ ಗೋವಿಂದರಿಗೆ ಆತ್ಮಾನಂದರೆಂಬ ಹೆಸರನ್ನು ಕೊಡಲಾಯಿತು. ತಮ್ಮ ಸಂನ್ಯಾಸ ದೀಕ್ಷೆಯ ನಂತರ ಆತ್ಮಾನಂದರು ಬೃಂದಾವನಕ್ಕೆ ತೆರಳಿ ಅಲ್ಲಿ ಕಠೋರ ತಪಸ್ಸನ್ನಾಚರಿಸಿದರು. ತುರೀಯಾನಂದ ಸ್ವಾಮಿಗಳು ಪತ್ರಗಳ ಮೂಲಕ ಅವರನ್ನು ಪ್ರೋತ್ಸಾಹಿಸುತ್ತಿದ್ದರು. ೧೮೯೯ರಲ್ಲಿ ನಿವೇದಿತೆಯೊಂದಿಗೆ ಆತ್ಮಾನಂದರು ಪ್ಲೇಗು ಮಹಾಮಾರಿ ನಿವಾರಣ ಕಾರ್ಯಕ್ರಮದಲ್ಲಿ ತಮ್ಮ ದೇಹದ ಆರೋಗ್ಯವನ್ನೂ ಲೆಕ್ಕಿಸದೆ ಸೇವೆಯನ್ನು ಸಲ್ಲಿಸಿದರು. ನಂತರ ೧೯೦೦-೧೯೦೧ರ ಅವಧಿಯಲ್ಲಿ ಕಿಷನ್‌ಗಢದಲ್ಲಿ ಕ್ಷಾಮಪೀಡಿತರ ಸೇವೆಯಲ್ಲಿ ತೊಡಗಿದರು. ನರರಲ್ಲಿ ಶಿವನನ್ನು ಕಂಡು ಸೇವೆ ಸಲ್ಲಿಸು ಎಂಬ ಗುರುವಾಕ್ಯ ಅವರಿಗೆ ಸ್ಫೂರ್ತಿದಾಯಕವಾಗಿತ್ತು.

ಒಂದು ದಿನ ಶಿಷ್ಯನನ್ನು ಪರೀಕ್ಷಿಸಲು ವಿವೇಕಾನಂದರು ತಮ್ಮ ಜೀವನದ ಕೆಲವು ಕುತೂಹಲಪೂರ್ಣ ವಿಚಾರಗಳನ್ನು ಹೇಳಿ "ಈಗಲೂ ನೀನು ನನ್ನನ್ನು ಗುರುವೆಂದು ಸ್ವೀಕರಿಸುವೆಯಾ?" ಎಂದಾಗ, ಆತ್ಮಾನಂದರು "ನೀವು ಏನು ಬೇಕಾದರೂ ಹೇಳಿ ಅಥವಾ ಮಾಡಿ. ನೀವೇ ನನ್ನ ಇಹ ಮತ್ತು ಪರ ಎಲ್ಲವೂ" ಎಂದರು. ಬಹಳ ವರ್ಷಗಳ ನಂತರ ಈ ದಿನಗಳನ್ನು ನೆನೆಸಿಕೊಳ್ಳುತ್ತಾ ಆತ್ಮಾನಂದರು ಹೇಳುತ್ತಿದ್ದರು: "ಸಾಧು ಜೀವನದ ಶ್ರೇಷ್ಠವಾದ ಆಸ್ತಿ ಗುರುವಾಕ್ಯ ಹಾಗೂ ವೇದಾಂತ ವಾಕ್ಯ. ಇವೆರಡರಲ್ಲಿ ಗುರುವಾಕ್ಯವೇ ಅಧಿಕತರ ಪ್ರಯೋಜನ ಉಳ್ಳದ್ದು." ಆತ್ಮಾನಂದರು ಕಟ್ಟಾ ಶಾಖಾಹಾರಿಗಳು. ಒಂದು ದಿನ ಸ್ವಾಮೀಜಿ ಅವರ ಗುರುಭಕ್ತಿಯನ್ನು ಪರೀಕ್ಷಿಸಲು ಒಂದು ಮೀನಿನ ತುಂಡನ್ನು ತಮ್ಮ ಕೈಯಿಂದ ಆತ್ಮಾನಂದರ ಎಲೆಗೆ ಹಾಕಿದರು. ಆತ್ಮಾನಂದರು ಕೂಡಲೇ ನಿಃಸಂಕೋಚವಾಗಿ ಅದನ್ನು ಪ್ರಸಾದವೆಂದು ಬಾಯಿಗೆ ಹಾಕಿಕೊಳ್ಳಲು ಉದ್ಯುಕ್ತರಾದರು. ಸ್ವಾಮೀಜಿ ಅವರ ಗುರುಭಕ್ತಿಯನ್ನು ಪ್ರಶಂಸಿಸಿ ಮೀನನ್ನು ತಿನ್ನದಂತೆ ತಡೆದರು.

ಆತ್ಮಾನಂದರು ತಮ್ಮ ಬಳಿ ಬಹು ಕಡಿಮೆ ಬಟ್ಟೆ, ಹಾಗೂ ಸಾಮಾನುಗಳನ್ನು ಇಟ್ಟುಕೊಳ್ಳುತ್ತಿದ್ದರು. ಅವರ ಜೀವನ ವಿಧಾನದಲ್ಲಿ ಕಠೋರವಾದ ತಾಪಸಿಕ ಪ್ರವೃತ್ತಿ ಎದ್ದು ಕಾಣುತ್ತಿದ್ದರೂ ಅಲ್ಲಿ ನಯ ನಾಜೂಕಿಗೆ ವಿಶೇಷ ಸ್ಥಾನವಿತ್ತು. ಅವರ ಕೋಣೆಯಲ್ಲಿದ್ದ ಒಂದು ಹಾಸಿಗೆಯನ್ನೂ ಬಹು ಜಾಗರೂಕತೆಯಿಂದ ಅಂದವಾಗಿ, ಶುಭ್ರವಾಗಿ ಇಡುತ್ತಿದ್ದರು. ಇದಕ್ಕೆ ಕಾರಣವೇನೆಂದು ಕೇಳಿದರೆ ಅವರು ಅತ್ಯಂತ ಭಾವವಶರಾಗಿ "ನೋಡಿ, ನನ್ನ ಗುರು ಸ್ವಾಮಿ ವಿವೇಕಾನಂದರು ಒಂದು ನನ್ನ ಹಾಸಿಗೆಯ ಮೇಲೆ ಮಲಗುತ್ತಿದ್ದರು. ಅವರ ಶರೀರ ಹೋದಮೇಲೂ ಕನಸಿನಲ್ಲಿ, ಅವರು ನನ್ನ ಹಾಸಿಗೆಯ ಮೇಲೆ ಮಲಗಿದ್ದುದನ್ನು ಕಂಡೆ. ಆದ್ದರಿಂದ ಅವರು ಯಾವಾಗಲಾದರೂ ಮಲಗಲು ಬರುವರೆಂದು ಈ ರೀತಿ ಅಣಿಮಾಡಿ ಇಟ್ಟಿರುವೆ" ಎಂದು ಹೇಳುತ್ತಿದ್ದರು. ಇದರಿಂದ ಗುರುವಿನೊಡನೆ ಅವರ ಸಂಪರ್ಕ ಎಷ್ಟು ಘನಿಷ್ಠವಾಗಿತ್ತು ಎಂಬುದು ತಿಳಿದು ಬರುತ್ತದೆ.

೧೯೦೨ರಲ್ಲಿ ಸ್ವಾಮಿ ವಿವೇಕಾನಂದರು ಬ್ರಹ್ಮಲೀನರಾದಮೇಲೆ ಆತ್ಮಾನಂದರಿಗೆ ಬದುಕಿನಲ್ಲಿ ಆಸಕ್ತಿಯೇ ಹೊರಟು ಹೋಯಿತು. ಊಟ, ಉಪಾಹಾರ ನಿದ್ರೆಗಳನ್ನು ಮರೆತರು. ಸ್ವಾಮೀಜಿ ಮಂದಿರದ ಬಳಿ ಒಂದು ಸಣ್ಣ ಕುಟೀರ ಕಟ್ಟಿಕೊಂಡು ಕಠೋರ ತಪಸ್ಸಿನಲ್ಲಿ ಮುಳುಗಿ ಹೋದರು. ಈ ರೀತಿ ಸ್ವಲ್ಪ ಕಾಲ ಕಳೆಯಲು ಮಠದ ಇತರ ಸಂನ್ಯಾಸಿಗಳ ಆದೇಶದ ಮೇರೆಗೆ ಮಠಕ್ಕೆ ಬಂದು ಇರಲಾರಂಭಿಸಿದರು. ಆಗ ಮಠದಲ್ಲಿ ಶಾರದಾನಂದರು ವೇದಾಂತ ಪಾಠ ಮಾಡುತ್ತಿದ್ದರು. ಆತ್ಮಾನಂದರು ಒಂದು ದಿನವೂ ಈ ತರಗತಿಯನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ವೇದಾಂತ ನಿಷ್ಠೆ ಅವರ ಜೀವನದ ವೈಶಿಷ್ಟ್ಯವಾಗಿತ್ತು.

ನಂತರದ ದಿನಗಳಲ್ಲಿ ಆತ್ಮಾನಂದರು ತಮ್ಮ ಸೇವಕರಿಗೆ ಹೇಳುತ್ತಿದ್ದರು, "ಒಂದು ದಿನ ಸ್ವಾಮಿ ವಿವೇಕಾನಂದರನ್ನು ಪ್ರತ್ಯಕ್ಷವಾಗಿ ನೋಡಿದೆ. ಅವರು ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ಮಾಡುತ್ತಿರುವಂತೆ ಅನುಭೂತಿಯಾಯಿತು" ಎಂದು. "ಸ್ವಾಮೀಜಿ ಎಷ್ಟು ದೊಡ್ಡ ಆಚಾರ್ಯರು! ಅವರು ಸಾಕ್ಷಾತ್ ಶಿವಾವತಾರಿ" ಎನ್ನುತ್ತಿದ್ದರು. ೧೯೦೪ರಲ್ಲಿ ಸ್ವಾಮಿ ರಾಮಕೃಷ್ಣಾನಂದರಿಗೆ ಸಹಾಯಕರಾಗಿ ಆತ್ಮಾನಂದರು ಮದ್ರಾಸಿಗೆ ಹೊರಟರು. ಆ ಹೊತ್ತಿಗಾಗಲೇ ಅವರು ಬೇಲೂರು ಮಠದ ಟ್ರಸ್ಟಿಗಳೂ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಲ್ಲಿ ಒಬ್ಬರೂ ಆಗಿದ್ದರು.

ಅಪ್ಪರಲ್ಲಿ ಭಕ್ತಾದಿಗಳು ಬೆಂಗಳೂರಿನಲ್ಲಿ ಒಂದು ರಾಮಕೃಷ್ಣ ಆಶ್ರಮವನ್ನು ಸ್ಥಾಪಿಸಿದರು. ಆತ್ಮಾನಂದರನ್ನೇ ಬೆಂಗಳೂರಿನ ನೂತನ ಆಶ್ರಮದ ಚಟುವಟಿಕೆಗಳನ್ನು ನಿರ್ವಹಿಸಲು ರಾಮಕೃಷ್ಣಾನಂದಜೀಯವರು ಕಳುಹಿಸಿದರು. ಈ ಮಠದಲ್ಲಿಯೇ ನೆಲೆಸಿ ಆತ್ಮಾನಂದರು ನಾಲ್ಕೂಕಡೆಯಲ್ಲಿ ರಾಮಕೃಷ್ಣ-ವಿವೇಕಾನಂದ ಭಾವಧಾರೆಯನ್ನು ಹರಡಿದರು. ಅವರ ಸೇವಾ ಮನೋಭಾವ, ಸಾಧುಶೀಲ, ಮೃದುಮಧುರ ಸ್ವಭಾವದಿಂದ ಆಕರ್ಷಿತರಾಗಿ ಅನೇಕರು ಆಶ್ರಮದ ಭಕ್ತರಾದರು. ಸತತ ಪರಿಶ್ರಮದಿಂದಾಗಿ ೧೯೦೯ರಲ್ಲಿ ಅವರ ಆರೋಗ್ಯ ಕೆಡುತ್ತಾ ಬಂದಿತು. ಆಶ್ರಮದ ಜವಾಬ್ದಾರಿಯನ್ನು ಗುರುಭ್ರಾತೃಗಳಾದ ವಿಮಲಾನಂದ ಮತ್ತು ಬೋಧಾನಂದರಿಗೆ ವಹಿಸಿ ಒಂದು ವರ್ಷ ವಿಶ್ರಾಂತಿಯಲ್ಲಿರಬೇಕಾಯಿತು. ೧೯೧೧ರಲ್ಲಿ ಶ್ರೀಮಾತೆ ಶಾರದಾದೇವಿಯವರ ಜೊತೆ ದಕ್ಷಿಣ ಭಾರತದ ತೀರ್ಥಯಾತ್ರೆ ಮಾಡಿ ಆತ್ಮಾನಂದಭರಿತರಾಗಿ, ಮದ್ರಾಸಿನಿಂದ ಪುರಿಗೆ ಹೋಗಿ, ಶ್ರೀಮಾತೆಯವರೊಂದಿಗೆ ಬೇಲೂರು ಮಠಕ್ಕೆ ಬಂದರು. ಶ್ರೀಗುರುವಿನ ಜೊತೆಯಲ್ಲಿ ಪಾಲ್ಗೊಂಡು ಮಾಡಿದ ಈ ತೀರ್ಥಾಟನೆ

**ಆತ್ಮಾನಂದರು ಹೇಳುತ್ತಿದ್ದರು, "ಸ್ವಾಮಿ ವಿವೇಕಾನಂದರನ್ನು ಅರಿಯಬೇಕಾದರೆ ಶ್ರೀರಾಮಕೃಷ್ಣ, ಶಾರದಾದೇವಿಯವರನ್ನು ಅರಿಯಬೇಕು. ಶ್ರೀರಾಮಕೃಷ್ಣ ಶಾರದಾ ದೇವಿಯವರನ್ನು ಅರಿಯಬೇಕಾದರೆ ಸ್ವಾಮಿ ವಿವೇಕಾನಂದರನ್ನು ಅರಿಯಬೇಕು" ಎಂದು.**

ಅವರ ಪಾಲಿಗೆ ಸುವರ್ಣಾಕ್ಷರಗಳಿಂದ ಬರೆದಿಡುವಂತಹ ವಿಷಯವಾಯಿತು. ಶ್ರೀಮಾತೆಯವರಲ್ಲಿ ಅವರಿಗೆ ಅಚಲವಾದ ಭಕ್ತಿಯಿತ್ತು. ಭುವನೇಶ್ವರ ಮಠದಲ್ಲಿ ಶ್ರೀಮಾತೆಯವರ ಭಾವಚಿತ್ರದ ಮುಂದೆ ನಿಂತು ಕಣ್ಣೀರು ಸುರಿಸುತ್ತಾ ನೈವೇದ್ಯ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತಿದ್ದರು. ಶ್ರೀಮಾತೆಯವರ ಭಾವಚಿತ್ರದಲ್ಲಿ ಸಾಕ್ಷಾತ್ ಮಾತೆಯವರ ಜೀವಂತ ಮೂರ್ತಿಯನ್ನು ಕಾಣುತ್ತಿದ್ದರು.

ಒಮ್ಮೆ ಮಠದ ನೂತನ ಬ್ರಹ್ಮಚಾರಿಗಳು ವೃಥಾ ಮಾತುಕತೆಗಳಾಡಿ ಕಾಲಹರಣ ಮಾಡುತ್ತಿರಲಾಗಿ ಅವರನ್ನು ಚೆನ್ನಾಗಿ ಗದರಿಸಿ ಸ್ವಾಮಿ ಪ್ರೇಮಾನಂದರು ಹೇಳುತ್ತಾರೆ: "ನೀವೆಲ್ಲಾ ನಿಜವಾಗಿ ಸಾಧುಗಳಾಗಬಯಸಿದರೆ ಇಂದಿನಿಂದ ಆತ್ಮಾನಂದರ ಸಹವಾಸ ಮಾಡಿ. ಅವರಿಂದ ಯಾವ ರೀತಿ ಮಠದಲ್ಲಿ ಬದುಕಬೇಕೆಂಬುದನ್ನು ಕಲಿಯಿರಿ." ಆಶ್ರಮದ ವಾತಾವರಣವನ್ನು ಸದಾ ಪವಿತ್ರವಾಗಿ ನಿಷ್ಕಳಂಕವಾಗಿ ಇರಿಸಲು ಆತ್ಮಾನಂದರು ಸದಾ ಪ್ರಯತ್ನಿಸುತ್ತಿದ್ದರು. ಶ್ರೀ ಗುರುಮಹಾರಾಜರ ಸೇವೆ ಯಾವ ರೀತಿಯಲ್ಲೂ ಕುಂದುಕೊರತೆಯಿಲ್ಲದೆ ನಡೆಯುವಂತೆ ಜಾಗರೂಕತೆ ವಹಿಸುತ್ತಿದ್ದರು. ಸ್ವಾಮಿ ಪ್ರೇಮಾನಂದರೇ ಆತ್ಮಾನಂದರಿಗೆ ಪೂಜಾರಿಯ ಆಸನದಲ್ಲಿ ಕೂಡಿಸಿ, ಪೂಜೆಯನ್ನು ಕಲಿಸಿದ್ದರು. ಆತ್ಮಾನಂದರು ಶ್ರೀರಾಮಕೃಷ್ಣರ ಪೂಜೆ ಮಾಡುತ್ತಿದ್ದುದನ್ನು ನೋಡುವುದಕ್ಕೆ ಭಾಗ್ಯವಿರಬೇಕಿತ್ತು—ಅಷ್ಟೊಂದು ಹೃದಯಪೂರ್ವಕವಾಗಿರುತ್ತಿತ್ತು ಆ ಪೂಜೆ. ಆತ್ಮಾನಂದರು ಪ್ರತಿದಿನ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ಸ್ವಲ್ಪಭಾಗ ಪಾರಾಯಣ ಮಾಡುತ್ತಿದ್ದರು. ಈ ರೀತಿ ಕೃತಿಶ್ರೇಣಿಯನ್ನು ೨೪ ಬಾರಿ ಪೂರ್ಣವಾಗಿ ಓದಿದ್ದರು. ಸ್ವಾಮಿ ವಿವೇಕಾನಂದರ ವಾಣಿಯನ್ನು ಮಂತ್ರಗಳನ್ನಾಗಿ ಭಾವಿಸುತ್ತಿದ್ದರು. ಹಲವಾರು ದಿನ ಆ ವಾಣಿಗಳನ್ನು ಕುರಿತು ಧ್ಯಾನ ಮಾಡುತ್ತಿದ್ದರು.

ತಮ್ಮ ಒಂದು ಅಭೂತಪೂರ್ವ ಆಧ್ಯಾತ್ಮಿಕ ಅನುಭೂತಿ ಶ್ರೀಮಾತೆಯವರನ್ನು ಕುರಿತಾಗಿ ನಡೆದುದನ್ನು ಸ್ವಾಮಿ ಶುದ್ಧಾನಂದರಿಗೆ ಈ ರೀತಿ ಬರೆದರು ಆತ್ಮಾನಂದರು: "ನಾನು ಶ್ರೀಮಾತೆಯವರ ತೊಡೆಯ ಮೇಲೆ ಓರ್ವ ಶಿಶುವಿನಂತೆ ಕುಳಿತು ಒಂದು ಸಮುದ್ರದ ಮೇಲೆ ತೇಲಿ ತೇಲಿಹೋಗುತ್ತಿದ್ದೆ. ಕಡೆಯಲ್ಲಿ ಅವರ್ಣನೀಯವಾದ ಆನಂದ ಉಂಟಾಯಿತು—ಆನಂದದ ತರಂಗಗಳು ಎಲ್ಲಾ ಕಡೆಯಿಂದ ಬರುತ್ತಿರುವಂತೆ—ಆಗ ನಾನು ಬಾಹ್ಯಜ್ಞಾನ ಶೂನ್ಯನಾದೆ. ಹಲವು ಸಮಯವಾದ ಬಳಿಕ ನಾನು ಮರಳಿ ಪ್ರಜ್ಞೆಗೆ ಬಂದಾಗ ಕಂಡೆ ನಾನೋರ್ವ ಶಿಶುವಾಗಿ ಮಾತೆಯ ಕೈಯಲ್ಲಿ ಆಟವಾಡುತ್ತಿರುವಂತೆ."

ಆತ್ಮಾನಂದರು ಆತ್ಮರತರಾದರೂ ಇತರರ ದುಃಖಗಳನ್ನು ಕಂಡು ಕರಗಿಹೋಗುತ್ತಿದ್ದರು. ಒಂದು ದಿನ ಓರ್ವ ಕೂಲಿಯವನು ಬಿಸಿಲಿನಲ್ಲಿ ಕೆಲಸ ಮಾಡಿ ಸುಸ್ತಾಗಲು ಆತನ ಸೇವೆಯನ್ನು ಮಾಡಿ, ಸಂತಸಗೊಂಡರು ಆತ್ಮಾನಂದರು. ಸ್ವಾಮಿ ಶಿವಾನಂದರು ಆತ್ಮಾನಂದರನ್ನು ಕುರಿತು, "ಶುಕುಲ್ ಶಿವತುಲ್ಯವ್ಯಕ್ತಿ" ಎನ್ನುತ್ತಿದ್ದರು. ಮಠಕ್ಕೆ ಸೇರಿದ ಬ್ರಹ್ಮಚಾರಿಗಳಿಗೆ ಅನೇಕ ನಿಯಮಗಳನ್ನು ಹೇಳಿಕೊಡುತ್ತಿದ್ದರು. ಅವುಗಳಲ್ಲಿ ಮುಖ್ಯವಾದವು ಇವು : (೧) ಕೆಲಸಕ್ಕಾಗಿ ಹೊರಗೆ ಹೋದರೆ ಸಂಜೆಗೆ ಮುಂಚೆ ಮಠಕ್ಕೆ ಬಾ. (೨) ವಿಷಯಾಸಕ್ತರಾದ ಗೃಹಸ್ಥರೊಡನೆ ಹೆಚ್ಚಾಗಿ ಮಾತನಾಡಬೇಡ. (೩) ಬೀದಿಯಲ್ಲಿ ನಡೆಯುವಾಗ ಅತ್ತಿತ್ತ ನೋಡದೆ ದೃಷ್ಟಿ ನೆಟ್ಟಗೆ ಇಟ್ಟು ನಡೆ.(೪) ಅನವಶ್ಯಕವಾದ ವಿಚಾರಗಳಲ್ಲಿ ಕುತೂಹಲ ತಾಳಬೇಡ, (೫) ಕೆಲಸವೇನೂ ಇಲ್ಲದಿದ್ದರೆ ಕೋಣೆಗೆ ಹೋಗಿ ನಿದ್ದೆ ಮಾಡುವುದು ಒಳ್ಳೆಯದು. (೬) ಯಾರಾದರೂ ಕೆಲಸಕ್ಕೆ ಬಾರದ ಮಾತನಾಡಲು ಪ್ರಾರಂಭಿಸಿದರೆ ಪುಸ್ತಕ ತೆಗೆದು ಓದಲಾರಂಭಿಸು, ಆಗ ಆ ವ್ಯಕ್ತಿ ಹೊರಟುಹೋಗುತ್ತಾನೆ. ಮೊದಲು ಆಧ್ಯಾತ್ಮಿಕ ನೈತಿಕ ಬಲವನ್ನು ಪಡೆದು ನಂತರ ಸೇವಾ ಕಾರ್ಯಗಳಲ್ಲಿ ನಿರತರಾಗಬೇಕೆಂದು ಅವರು ಸಾಧು ಬ್ರಹ್ಮಚಾರಿಗಳಿಗೆ ಹೇಳುತ್ತಿದ್ದರು.

ಢಾಕಾದಲ್ಲಿ ಆತ್ಮಾನಂದರಿದ್ದಾಗ ಅನೇಕ ಗೃಹಸ್ಥರು ಅವರ ಪ್ರವಚನಗಳನ್ನು ತಪ್ಪದೆ ಕೇಳುತ್ತಿದ್ದರು. ಅವರ ಬಳಿ ತಮ್ಮ ಸಮಸ್ಯೆಗಳನ್ನು ಹೇಳಿ ಅದಕ್ಕೆ ಸರಿಯಾದ ಸಮಾಧಾನಗಳನ್ನು ಪಡೆಯುತ್ತಿದ್ದರು. ಅವರ ಪೂತ ಸಾನ್ನಿಧ್ಯದಿಂದ ತಮ್ಮ ಆಧ್ಯಾತ್ಮಿಕ ಜೀವನವನ್ನು ಉತ್ತಮಗೊಳಿಸಿಕೊಳ್ಳುತ್ತಿದ್ದರು. ನಿತ್ಯವೂ ಅವರೆಲ್ಲಾ ಗೀತಾ ಪಾರಾಯಣ, ಶಾಸ್ತ್ರ ವ್ಯಾಖ್ಯೆ ಮುಂತಾದುವುಗಳನ್ನು ಮಾಡುತ್ತಾ ಅತ್ಯಾನಂದವನ್ನು ಅನುಭವಿಸುತ್ತಿದ್ದರು. ಒಂದು ದಿನ ಓರ್ವ ಭಕ್ತನು ಅವರ ಅಲೌಕಿಕ ದರ್ಶನಾದಿಗಳ ಬಗ್ಗೆ ತಮಗೆ ಹೇಳಬೇಕೆಂದು ಕೇಳಿಕೊಳ್ಳಲು ಸ್ವಾಮಿ ಆತ್ಮಾನಂದರು ಈ ರೀತಿ ಹೇಳಿದರು: "ನೋಡಯ್ಯ, ನಾನು ಸಾಕ್ಷಾತ್ ಸ್ವಾಮಿ ವಿವೇಕಾನಂದರ ದರ್ಶನ ಮಾಡಿರುವೆ! ಇನ್ನು ಬೇರೆಯ ದರ್ಶನಗಳ ಮಾತೇಕೆ? ಸ್ವಾಮೀಜಿ ಸಾಕ್ಷಾತ್ ಸದಾಶಿವ. ಆದ್ದರಿಂದ ಇತರ ದರ್ಶನಗಳಿಂದ ನನಗೇನು ಪ್ರಯೋಜನ? ನಾನು ಅವರ ಕೃಪೆಗೆ ಪಾತ್ರನಾದೆ. ಅವರ ಕೃಪಾಕಟಾಕ್ಷದಿಂದ ನನ್ನ ಜೀವನ ಧನ್ಯವಾಗಿದೆ. ನನಗೆ ಸ್ವಾಮಿ ವಿವೇಕಾನಂದರೇ ಆಶ್ರಿತ ವತ್ಸಲರು. ಅವರು ನನಗೆ ಅನೇಕ ಬಾರಿ ಹೇಳಿದ್ದಾರೆ, 'ನನ್ನನ್ನು ಆಶ್ರಯಿಸಿದವರು ನರಕಕ್ಕೆ ಹೋದರೂ ನಾನವರನ್ನು ಉದ್ಧರಿಸುತ್ತೇನೆ' ಎಂದು." ಸ್ವಾಮಿ ವಿವೇಕಾನಂದರ ಕೃಪೆಯನ್ನು ಪಡೆದು ಆತ್ಮಾನಂದರು ಪೂರ್ಣಕಾಮರಾಗಿದ್ದರು.

೧೯೨೨ರಲ್ಲಿ ಕಾಶಿಯಲ್ಲಿ ಸ್ವಾಮಿ ತುರೀಯಾನಂದರು ನಿರ್ಯಾಣ ಹೊಂದಿದರು. ಆ ಕೊರತೆಯನ್ನು ತುಂಬಲು ಆತ್ಮಾನಂದರನ್ನು ಅಲ್ಲಿಗೆ ಕಳುಹಿಸಲು ಶಿವಾನಂದರು ಅವರನ್ನು ಬೇಲೂರು ಮಠಕ್ಕೆ ಬರಮಾಡಿಕೊಂಡರು. ೧೯೨೩ರಲ್ಲಿ ಆತ್ಮಾನಂದರನ್ನು ಆಶೀರ್ವದಿಸಿ ಶಿವಾನಂದರು ಅವರನ್ನು ಕಾಶಿಗೆ ಕಳುಹಿಸಿದರು. ಪರಸ್ಪರ ಅಗಲುವಾಗ

ಇಬ್ಬರಿಗೂ ತಡೆಯಕೊಳ್ಳಲಾಗದ ದುಃಖ ಉಕ್ಕಿ ಬಂದು ಅಳಲಾರಂಭಿಸಿದರು. ಅದೇ ಅವರ ಕಡೆಯ ಭೇಟಿಯೆಂದು ದೈವ ನಿಯಾಮಕವೇ ಆಗಿತ್ತು. ಸ್ವಾಮಿ ಶಾರದಾನಂದರ ಆಶೀರ್ವಾದವನ್ನು ಪಡೆಯಲು ಉದ್ಬೋಧನಕ್ಕೆ ಭೇಟಿಕೊಟ್ಟು ಆತ್ಮಾನಂದರು ಕಾಶಿಯ ಕಡೆಗೆ ಹೊರಟರು.

ಕಾಶಿ ಕ್ಷೇತ್ರವನ್ನು ಸೇರಿದ ಆತ್ಮಾನಂದರು ಅಲ್ಲಿನ ಭಕ್ತರಿಗೆ ಮಠದ ಸಾಧು ಬ್ರಹ್ಮಚಾರಿಗಳಿಗೆ ಅತ್ಯಂತ ಆನಂದವನ್ನುಂಟು ಮಾಡಿದರು. ಅನೇಕ ಆಧ್ಯಾತ್ಮಿಕ ಕಾರ್ಯಕ್ರಮಗಳಿಂದಾಗಿ ಭಕ್ತರೆಲ್ಲಾ ಶಾರೀರಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳನ್ನು ಅರ್ಜಿಸಲಾರಂಭಿಸಿದರು.

ಹೀಗೆ ಕೆಲವು ಕಾಲ ಕಳೆಯಲು ಆತ್ಮಾನಂದರು ಏಕಾಂತದಲ್ಲಿ ಗಂಗಾ ತಟದಲ್ಲಿ ಕುಳಿತು ಜಪಧ್ಯಾನಾದಿಗಳನ್ನು ಮಾಡುತ್ತಿದ್ದರು. ಹೆಚ್ಚು ಸಮಯ ಸಾಧನೆ ಭಜನೆಗಳಲ್ಲೇ ಕಳೆದುಹೋಗುತ್ತಿತ್ತು. ಆದರ್ಶ ಜೀವನವೇ ಮೂರ್ತೀಭವಿಸಿದಂತಿದ್ದ ಆತ್ಮಾನಂದರ ವ್ಯಕ್ತಿತ್ವ ಎಲ್ಲರನ್ನೂ ಮುಗ್ಧಗೊಳಿಸುತ್ತಿತ್ತು.

ಅಕಸ್ಮಾತ್ತಾಗಿ ಆತ್ಮಾನಂದರಿಗೆ ಜ್ವರ ಬಂತು. ಕ್ರಮೇಣ ಅದು ನ್ಯುಮೋನಿಯಾ ಆಗಿ ಪರಿಣಮಿಸಿತು. ವೈದ್ಯಕೀಯ ಚಿಕಿತ್ಸೆಯಿಂದ ಏನೂ ಪ್ರಯೋಜನವಾಗಲಿಲ್ಲ. ಒಂದು ದಿನ ಅವರು ತಮಗೆ ಸೇವೆ ಗೈಯುತ್ತಿದ್ದವರಿಗೆ ಹೇಳಿದರು, "ಇನ್ನು ಹೆಚ್ಚು ದಿನ ನಾನು ನಿಮಗೆ ಶ್ರಮ ಕೊಡುವುದಿಲ್ಲ. ನನಗೆ ಸ್ವಾಮೀಜಿಯವರ ಕರೆ ಬಂದಿದೆ" ಎಂದು.

೧೯೨೩ರ ಅಕ್ಟೋಬರ್ ೧೭ರಂದು ಸಂಜೆ ೭.೨೫ಕ್ಕೆ ಶಿವಕ್ಷೇತ್ರವಾದ ಕಾಶಿಯಲ್ಲಿ ಆತ್ಮಾನಂದರು ದೇಹತ್ಯಾಗ ಮಾಡಿದರು. ಆ ಸುದ್ದಿಯನ್ನು ಸ್ವಾಮಿ ಶುದ್ಧಾನಂದರು ಅಧ್ಯಕ್ಷರಾದ ಸ್ವಾಮಿ ಶಿವಾನಂದರಿಗೆ ತಿಳಿಸಲು ಅವರು, "ಶುಕುಲ್ ಮಹಾರಾಜ್ ಮಹಾನು ಭಾವ" ಎಂದರು. ಈ ರೀತಿಯಲ್ಲಿ ಶ್ರದ್ಧೆ, ವಿನಯ, ಆತ್ಮತತ್ಪರತೆ ಮುಂತಾದ ಸದ್ಗುಣಗಳಿಂದ ಅರಳಿದ ಆತ್ಮಪದ್ಮವೊಂದು ಸ್ವಾಮಿ ವಿವೇಕಾನಂದರ ಚರಣಗಳನ್ನು ಅಲಂಕರಿಸಿತು. *

# "ಪ್ರೋಸ್ತಾಂ ಪರ್ಬು" ಇದರ ಬಗ್ಗೆ ಒಂದು ಮಾತು

**ಸ್ವಾಮಿ ರಾಘವೇಶಾನಂದ**

**ಬೆಂಗಳೂರಿನಲ್ಲಿ ಅಲಸೂರಿನ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ರಾಘವೇಶಾನಂದರು ನಮ್ಮ ಓದುಗರಿಗೆ ಪರಿಚಿತರು. ಅವರು ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದ ಪೋಸ್ತಾಂ ಪರ್ಬು ಲೇಖನದ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ಈ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.**

**ಈ ಪತ್ರಿಕೆಯ ಅಕ್ಟೋಬರ್** (2001) ಸಂಚಿಕೆಯಲ್ಲಿ ಪೋಸ್ತಾಂ ಪರ್ಬು ಕಥೆಯನ್ನು ಓದಿ ಸರಿಯಾಗಿ ಅರ್ಥಮಾಡಿಕೊಳ್ಳಲಾಗದೆ ಕೆಲವು ಭಕ್ತರು "ಭಗವಂತನನ್ನು ಪ್ರಾರ್ಥಿಸುವ ಆವಶ್ಯಕತೆ ಇದೆಯೇ?" ಎಂದು ನನ್ನನ್ನು ಪ್ರಶ್ನಿಸಿದರು. ಪೋಸ್ತಾಂ ಪರ್ಬು ಕ್ರೈಸ್ತಧರ್ಮ ಸಾಂಪ್ರದಾಯಿಕವಾಗಿ ಒಪ್ಪಿಕೊಂಡ ಮಾರ್ಗಕ್ಕಿಂತ ಭಿನ್ನವಾದ ಮಾರ್ಗವನ್ನು ಹಿಡಿದು ಬರೀ ದುಡಿಮೆ, ಪರೋಪಕಾರ ಮುಂತಾದ ಸತ್ಕರ್ಮಗಳಿಂದ ಮಾತ್ರವೇ ನರಕವನ್ನೇ ಸ್ವರ್ಗವನ್ನಾಗಿ ಮಾರ್ಪಡಿಸಿದ ಒಬ್ಬ ಮಹಾತ್ಮ. ಅಂತಹ ಮಹಾತ್ಮರು ಅತಿ ವಿರಳ. ಅಲ್ಲದೆ ಅಂತಹವರು ಹಿಂದೆ ಹಲವಾರು ಸಾಧನೆಗಳನ್ನು ಮಾಡಿ ಕೊನೆಗೆ ಆ ಪರಿಪಕ್ವ ನೆಲೆಯನ್ನು ಹೊಂದಿರುತ್ತಾರೆ. ಪೋಸ್ತಾಂ ಪರ್ಬುವನ್ನು ವೇದಾಂತದ ಜನಕ ಮಹಾರಾಜನಿಗೆ ಹೋಲಿಸಬಹುದು. ಅವನು ಕರ್ಮಯೋಗದಿಂದಲೆ ಸಾಕ್ಷಾತ್ಕಾರವನ್ನು ಪಡೆದ ಎಂದು ಗೀತೆಯಲ್ಲಿ ಹೇಳಿದೆ. ಇದರ ಪ್ರಸ್ತಾಪ ಬಂದಾಗ ಶ್ರೀರಾಮಕೃಷ್ಣರು ಹೇಳುತ್ತಾರೆ—"ಜನಕ ಒಂದೇ ಸಲಕ್ಕೆ ಅಂತಹ ಸ್ಥಿತಿಯನ್ನು ಪಡೆಯಲಿಲ್ಲ. ಅದಕ್ಕಾಗಿ ಅವನು ಹಿಂದೆ ಬಹಳ ತಪಸ್ಸು, ಪೂಜೆ ಮಾಡಿದ್ದ."

ಮಹಿಮಾಚರಣ ಎನ್ನುವವನು ಶ್ರೀರಾಮಕೃಷ್ಣರ ಒಬ್ಬ ಭಕ್ತ. ಅವನಿಗೆ ಯಾವಾಗಲೂ ಸೇವಾಕಾರ್ಯಗಳಲ್ಲಿ ತೊಡಗಿರುವುದರಲ್ಲಿ ಆಸಕ್ತಿ. ಪರೋಪಕಾರಾರ್ಥವಾಗಿ ಹೊಸ ಶಾಲೆಯೊಂದನ್ನು ತೆರೆದಿದ್ದ. ಅವನು ಒಂದು ದಿನ ಶ್ರೀರಾಮಕೃಷ್ಣರ ಬಳಿ ಮಾತನಾಡುತ್ತಿದ್ದ. ಆ ಸಂಭಾಷಣೆಯನ್ನು ಅವರ ಬಾಯಲ್ಲೇ ಕೇಳೋಣ:

ಶ್ರೀರಾಮಕೃಷ್ಣರು ಮಹಿಮಾಚರಣನಿಗೆ—"ಒಮ್ಮೆ ಶಂಭು ಮಲ್ಲಿಕ ನನಗೆ ಹೇಳಿದ : 'ನನ್ನಲ್ಲಿರುವ ಹಣವನ್ನು ಸತ್ಕಾರ್ಯಗಳಿಗೆ ಉಪಯೋಗಿಸಬೇಕೆಂದು ಸಂಕಲ್ಪಿಸಿದ್ದೇನೆ.' ನಾನು ಹೇಳಿದೆ, 'ನೀನು ಈ ಕಾರ್ಯಗಳನ್ನೆಲ್ಲಾ ನಿಷ್ಕಾಮ ಭಾವನೆಯಿಂದ ಮಾಡುವುದಾದರೇನೋ ಅದು ಬಹಳ ಒಳ್ಳೆಯದೇ, ಆದರೆ ಹಾಗೆ ಮಾಡುವುದು ಬಹಳ ಕಷ್ಟ. ಯಾವ ಕಡೆಯಿಂದಲೋ ಕಾಮನೆ, ನಮ್ಮ ಹೃದಯವನ್ನು ಹೊಕ್ಕಿಬಿಡುತ್ತದೆ. ನಿನಗೊಂದು ಪ್ರಶ್ನೆ ಹಾಕಬೇಕೆಂದಿದ್ದೇನೆ. ಒಂದು ಪಕ್ಷ ನಿನ್ನ ಎದುರು ಭಗವಂತ ಬಂದರೆ, ಆತನನ್ನು ಕೆಲವು ಸ್ಕೂಲು, ಡಿಸ್ಪೆನ್ಸರಿ, ಆಸ್ಪತ್ರೆ ಇವುಗಳಿಗಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೀಯೋ?'"

ಒಮ್ಮೆ ಇಬ್ಬರು ವಿದೇಶೀ ಸ್ತ್ರೀಯರು ಸ್ವಾಮಿ ಅದ್ಭುತಾನಂದರನ್ನು ಭೇಟಿ ಮಾಡಲು ಬಂದರು. ಅವರು ನಾಸ್ತಿಕರು. ಆದರೆ ಅವರು ಮಾನವರಿಗೆ ಸೇವೆ ಸಲ್ಲಿಸುವುದರಲ್ಲಿ ಆಸಕ್ತಿ ಉಳ್ಳವರಾಗಿದ್ದರು. ಒಬ್ಬಳು ಹೇಳಿದಳು, "ಸ್ವಾಮೀಜಿ, ಬೇರೆಯವರಿಗೆ ಒಳ್ಳೆಯದನ್ನು ಮಾಡುವುದೇ ಜೀವನದ ಧ್ಯೇಯ. ಆ ವಿಷಯದಲ್ಲಿ ನಾವು ನಿಮ್ಮ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೇವೆ. ಆದರೆ ನೀವು ಭಗವಂತನಿಗೆ ಅದಕ್ಕಿಂತ ಹೆಚ್ಚಿನ ಸ್ಥಾನವನ್ನು ಕೊಡುತ್ತೀರಿ. ಅದನ್ನು ನಾವು ಒಪ್ಪುವುದಿಲ್ಲ. ಭಗವಂತನನ್ನು ಕಾಣಲಾಗುವುದಿಲ್ಲ. ಅವನು ಇದ್ದಾನೆ ಎನ್ನುವುದಕ್ಕೂ ಯಾವ ಪ್ರಮಾಣವೂ ಇಲ್ಲ. ನೀವು ಈ ಕಾಣದ ದೇವನನ್ನು ನಂಬಿ, ಈ ಕೆಲಸಗಳನ್ನು ಮಾಡಿ ಎಂದು ಏಕೆ ಒತ್ತಾಯಿಸುತ್ತೀರೋ ನನಗೆ ಅರ್ಥವಾಗುತ್ತಿಲ್ಲ."